ರಾಜ್ಯದಲ್ಲಿರುವ ಡೈರಿ ಒಕ್ಕೂಟ ರೈತರಿಂದ ಕೊಳ್ಳುವ ಹಾಲಿಗೆ ಏಕರೂಪದ ದರ ನಿಗದಿ

1582 (1412) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಡೇರಿ ಒಕ್ಕೂಟಗಳು ರೈತರಿಂದಕೊಳ್ಳುವ ಪ್ರತಿ ಲೀಟರ್ ಹಾಲಿಗೆ ಸಂಬಂಧಪಟ್ಟ ಒಕ್ಕೂಟಗಳು ಕಳೆದ 3 ವರ್ಷಗಳಿಂದ ಎಷ್ಟು ಹಣ ನೀಡುತ್ತಿವೆ: ವಿವರಣೆ ಕೊಡಿ:

ಆ) ಒಕ್ಕೂಟಗಳು ಹಾಲು ಕೊಳ್ಳುವ ದರವನ್ನು ಏಕರೂಪದಲ್ಲಿ ನಿಗಧಿ ಮಾಡದಿರಲು ಕಾರಣವೇನು:

ಇ) ಕಡಿಮೆ ದರದಲ್ಲಿ ಹಾಲಿಗೆ ಬೆಲೆ ನೀಡುವುದರಿಂದ ಹಾಲು ಉತ್ಪಾದಕರಿಗೆ ನಷ್ಟವಾಗುವುದಿಲ್ಲವೆ: (ವಿವರ ನೀಡುವುದು)?

ಶ್ರೀ ಎಂ. ಮಹದೇವ್ (ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು):

ಅ) ಹಾಲು ಒಕ್ಕೂಟಗಳು ಕಳೆದ ಮೂರು ವರ್ಷಗಳಿಂದ ರೈತರಿಂದ ಕೊಳ್ಳುವ ಪ್ರತಿ ಲೀಟರ್ ಹಾಲಿನ ದರದ ವಿವರವನ್ನು ಅನುಬಂಧ-I ಮತ್ತು ಅನುಬಂಧ -II ಮತ್ತು ಅನುಬಂಧ-III ರಲ್ಲಿ ನೀಡಲಾಗಿದೆ.

ಆ) ಆಯಾ ಹಾಲು ಒಕ್ಕೂಟದ ಆಡಳಿತ ಮಂಡಳಿಯು ಹಾಲು ಖರೀದಿಯ ಬೆಲೆಯನ್ನು ಕಾಲಕಾಲಕ್ಕೆ ನಿರ್ಧರಿಸಿ ಜಾರಿಗೆ ತರುತ್ತವೆ. ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ ಹೆಚ್ಚಿನ ದರ ನೀಡಿ ಸುಗ್ಗಿ ಕಾಲದಲ್ಲಿ ಕಡಿಮೆ ದರ ನಿಗಧಿಪಡಿಸುತ್ತಾರೆ. ಹಾಲಿನ ಖರೀದಿ ದರವನ್ನು ನಿಗಧಿಪಡಿಸುವಾಗ ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ತೀರ್ಮಾನಿಸುತ್ತಾರೆ.

1. ಒಕ್ಕೂಟದಲ್ಲಿ ದಿನವಹಿ ಶೇಖರಣೆಯಾಗುತ್ತಿರುವ ಹಾಲಿನ ಪ್ರಮಾಣ

2. ಒಕ್ಕೂಟವು ಚಿಲ್ಲರೆಯಾಗಿ ಗ್ರಾಹಕರಿಗೆ ದಿನವಹಿ ಮಾರಾಟ ಮಾಡುವ ಹಾಲಿನ ಪ್ರಮಾಣ.

3. ಒಕ್ಕೂಟದ ಸಿಬ್ಬಂದಿ ವೆಚ್ಚ ಸಂಸ್ಕರಣಾ ವೆಚ್ಚ ಹಾಗೂ ಹಾಲು ಸಾಗಾಣಿಕಾ ವೆಚ್ಚಗಳು.

4. ಪರಿವರ್ತನೆಗೆ ಕಳುಹಿಸುವ ಹಾಲಿನ ಪ್ರಮಾಣ ಮತ್ತು ಇದರಿಂದಾಗುವ ವ್ಯಾಪಾರ ನಷ್ಟ.

5. ಸಗಟು ರೂಪದಲ್ಲಿ ಇತರೇ ಡೇರಿಗಳಿಗೆ ಹಾಗೂ ಖಾಸಗಿ ಡೇರಿಗಳಿಗೆ ಮಾರಾಟ ಮಾಡುವ ಪ್ರಮಾಣ.

6. ಒಕ್ಕೂಟದ ಆರ್ಥಿಕ ಪರಿಸ್ಥಿತಿ.

ಇ) ಹಾಲು ಒಕ್ಕೂಟಗಳು ಮೇಲೆ ತಿಳಿಸಿದ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು ಹಾಲಿನ ಖರೀದಿ ದರವನ್ನು ನಿಗಧಿಪಡಿಸುತ್ತವೆ. ಅನೇಕ ಹಾಲು ಉತ್ಪಾದಕರು ಹೈನುಗಾರಿಕೆಯನ್ನು

ಉಪ ಕಸುಬನ್ನಾಗಿ ಮಾಡಿಕೊಂಡಿರುತ್ತಾರೆ. ಅನುಬಂಧ-I, II ಮತ್ತು III ರಲ್ಲಿ ನೀಡಿರುವ ಬೆಲೆಗಳನ್ನು ವಿವಿಧ ಒಕ್ಕೂಟಗಳು ಮೂರು ವರ್ಷಗಳಿಂದ ನೀಡುತ್ತಿದ್ದು ವರ್ಷದಿಂದ ವರ್ಷಕ್ಕೆ ಸರಾಸರಿ ಹಾಲಿನ ಶೇಖರಣೆ ಶೇಕಡ 8 ರಷ್ಟು ಹೆಚ್ಚಾಗುತ್ತದೆ. ಹಸುವಿನಿಂದ ಇತರ ಸಂಭವನೀಯ ಆದಾಯವನ್ನು ಪರಿಶೀಲನೆಗೆ ತೆಗೆದುಕೊಂಡಾಗ ಹಾಲು ಒಕ್ಕೂಟಗಳು ಪ್ರಸ್ತುತ ನೀಡಿರುವ ಸಂಗ್ರಹಣೆ ಬೆಲೆಯು ಸಮಂಜಸವೆಂದು ಪರಿಗಣಿಸಬಹುದಾಗಿದೆ.

ಹಾಲು ಒಕ್ಕೂಟಗಳು ಹೈನು ಅಭಿವೃದ್ಧಿಗಾಗಿ ಪಶು ವೈದ್ಯ ಚಿಕಿತ್ಸೆ, ಕೃತಕ ಗರ್ಭಧಾರಣಾ ಸೌಲಭ್ಯ, ಹಸಿರು ಮೇವಿನ ಬೆಳವಣಿಗೆಗೆ ಪ್ರೋತ್ಸಾಹ, ರಿಯಾಯಿತಿ ದರದಲ್ಲಿ ಬೀಜ ಬೀರುಗಳನ್ನು ಸರಬರಾಜು ಮಾಡುವುದು ಮತ್ತು ಸಮಂಜಸದರದಲ್ಲಿ ಉತ್ಕೃಷ್ಟವಾದ ಸಮತೋಲನ ಪಶು ಆಹಾರ ಸೌಲಭ್ಯವನ್ನು ನೀಡುತ್ತಿದ್ದು ಹಾಲಿನ ಉತ್ಪಾದನಾ ವೆಚ್ಚವನ್ನು ಆದಷ್ಟು ಕಡಿಮೆ ಮಟ್ಟದಲ್ಲಿ ಇಡಲು ಸಹಕಾರಿಯಾಗಿದೆ.

ಅನುಬಂಧ - 1

ಜಿಲ್ಲಾ ಹಾಲು ಒಕ್ಕೂಟಗಳು ಕಳೆದ ಮೂರು ವರ್ಷಗಳಿಂದ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ನೀಡುತ್ತಿರುವ ದರಗಳ ವಿವರ:

(ರೂ. ಗಳಲ್ಲಿ)

ಕ್ರಮ ಸಂಖ್ಯೆ	ಹಾಲು ಒಕ್ಕೂಟಗಳ ಹೆಸರು	2000ನೇ ಸಾಲಿನಲ್ಲಿ	
1	2	3	
1.	ಬೆಂಗಳೂರು	ದಿನಾಂಕ 8-2-2000	8.50
		ದಿನಾಂಕ 19-6-2000	8.20
2.	ಕೋಲಾರ	ದಿನಾಂಕ 1-4-2000	8.20
		ದಿನಾಂಕ 16-6-2000	7.90
3.	ದಕ್ಷಿಣ ಕನ್ನಡ		9.75
4.	ಮಂಡ್ಯ		7.90
5.	ರಾಯಚೂರು ಬಳ್ಳಾರಿ	ಹಸುವಿನ ಹಾಲಿಗೆ	7.40
		ಎಮ್ಮೆಯ ಹಾಲಿಗೆ	8.25
6.	ಧಾರವಾಡ	ಹಸುವಿನ ಹಾಲಿಗೆ	
		ದಿನಾಂಕ 16-1-2000	7.50
		ದಿನಾಂಕ 1-5-2000	8.00
		ದಿನಾಂಕ 1-8-2000	7.50
		ದಿನಾಂಕ 16-11-2000	7.00
		ಎಮ್ಮೆಯ ಹಾಲಿಗೆ	
		ದಿನಾಂಕ 16-1-2000	9.00
		ದಿನಾಂಕ 8-2-2000	9.15
		ದಿನಾಂಕ 1-3-2000	9.15

1	2	3	
		ದಿನಾಂಕ 1-5-2000	10.00
		ದಿನಾಂಕ 1-8-2000	9.15
		ದಿನಾಂಕ 16-11-2000	9.00
7.	ಗುಲ್ಬರ್ಗಾ	ಹಸುವಿನ ಹಾಲಿಗೆ	7.00
		ಎಮ್ಮೆಯ ಹಾಲಿಗೆ	9.00
8.	ಹಾಸನ	ದಿನಾಂಕ 1-4-2000	7.90
		ದಿನಾಂಕ 13-9-2000	7.53
9.	ಮೈಸೂರು	ದಿನಾಂಕ 1-3-2000	8.05
		ದಿನಾಂಕ 15-6-2000	8.05
10.	ಬಿಜಾಪುರ		8.22
11.	ತುಮಕೂರು		7.30
12.	ಬೆಳಗಾಂ	ಹಸುವಿನ ಹಾಲಿಗೆ	
		ದಿನಾಂಕ 1-5-2000	7.60
		ದಿನಾಂಕ 11-7-2000	7.90
		ದಿನಾಂಕ 21-10-2000	7.00
		ಎಮ್ಮೆಯ ಹಾಲಿಗೆ	
		ದಿನಾಂಕ 1-5-2000	10.30
		ದಿನಾಂಕ 11-7-2000	10.30
		ದಿನಾಂಕ 21-10-2000	8.80
13.	ಶಿವಮೊಗ್ಗ	ದಿನಾಂಕ 1-11-2000	8.05

ಅನುಬಂಧ - II

ಜಿಲ್ಲಾ ಹಾಲು ಒಕ್ಕೂಟಗಳು ಕಳೆದ ಮೂರು ವರ್ಷಗಳಿಂದ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ನೀಡುತ್ತಿರುವ ದರಗಳ ವಿವರ:

(ರೂ. ಗಳಲ್ಲಿ)

ಕ್ರಮ ಸಂಖ್ಯೆ	ಹಾಲು ಒಕ್ಕೂಟಗಳ ಹೆಸರು	2001ನೇ ಸಾಲಿನಲ್ಲಿ	
1	2	3	
1.	ಬೆಂಗಳೂರು	ದಿನಾಂಕ 1-3-2001	8.50
		ದಿನಾಂಕ 10-5-2001	8.0
2.	ಕೋಲಾರ	ದಿನಾಂಕ 1-3-2001	8.20
		ದಿನಾಂಕ 1-5-2001	7.90
		ದಿನಾಂಕ 10-6-2001	7.70
		ದಿನಾಂಕ 16-11-2001	7.50

1	2	3	
3.	ದಕ್ಷಿಣ ಕನ್ನಡ		9.75
4.	ಮಂಡ್ಯ		8.10
5.	ರಾಯಚೂರು ಬಳ್ಳಾರಿ	ಹಸುವಿನ ಹಾಲಿಗೆ	7.35
		ಎಮ್ಮೆಯ ಹಾಲಿಗೆ	8.75
6.	ಧಾರವಾಡ	ಹಸುವಿನ ಹಾಲಿಗೆ	
		ದಿನಾಂಕ 31-1-2001	7.00
		ದಿನಾಂಕ 15-4-2001	7.50
		ದಿನಾಂಕ 30-6-2001	8.00
		ದಿನಾಂಕ 7-12-2001	7.50
		ಎಮ್ಮೆಯ ಹಾಲಿಗೆ	
		ದಿನಾಂಕ 31-1-2001	9.00
		ದಿನಾಂಕ 15-4-2001	9.50
		ದಿನಾಂಕ 30-6-2001	10.00
		ದಿನಾಂಕ 7-12-2001	10.00
7.	ಗುಲ್ಬರ್ಗಾ	ಹಸುವಿನ ಹಾಲಿಗೆ	8.00
		ಎಮ್ಮೆಯ ಹಾಲಿಗೆ	10.00
8.	ಹಾಸನ	ದಿನಾಂಕ 1-4-2000	7.90
		ದಿನಾಂಕ 13-9-2000	7.53
9.	ಮೈಸೂರು	ದಿನಾಂಕ 1-2-2001	8.00
		ದಿನಾಂಕ 1-7-2001	7.60
		ದಿನಾಂಕ 5-11-2001	7.20
10.	ಬಿಜಾಪುರ		8.55
11.	ತುಮಕೂರು		7.30
12.	ಬೆಳಗಾಂ	ಹಸುವಿನ ಹಾಲಿಗೆ	
		ದಿನಾಂಕ 1-2-2001	7.30
		ದಿನಾಂಕ 11-4-2001	7.70
		ದಿನಾಂಕ 11-6-2001	7.80
		ಎಮ್ಮೆಯ ಹಾಲಿಗೆ	
		ದಿನಾಂಕ 1-2-2001	9.60
		ದಿನಾಂಕ 11-4-2001	10.00
		ದಿನಾಂಕ 11-6-2001	10.80
13.	ಶಿವಮೊಗ್ಗ	ದಿನಾಂಕ 11-10-2001	8.30

ಅನುಬಂಧ - III

ಜಿಲ್ಲಾ ಹಾಲು ಒಕ್ಕೂಟಗಳು ಕಳೆದ ಮೂರು ವರ್ಷಗಳಿಂದ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ನೀಡುತ್ತಿರುವ ದರಗಳ ವಿವರ:

(ರೂ. ಗಳಲ್ಲಿ)

ಕ್ರಮ ಸಂಖ್ಯೆ	ಹಾಲು ಒಕ್ಕೂಟಗಳ ಹೆಸರು	2002ನೇ ಸಾಲಿನಲ್ಲಿ	
1	2	3	
1.	ಬೆಂಗಳೂರು	ದಿನಾಂಕ 1-4-2002	8.50
		ದಿನಾಂಕ 16-11-2002	8.20
2.	ಕೋಲಾರ	ದಿನಾಂಕ 1-3-2002	8.00
		ದಿನಾಂಕ 1-4-2002	8.50
		ದಿನಾಂಕ 1-7-2002	8.00
		ದಿನಾಂಕ 1-9-2002	8.25
		ದಿನಾಂಕ 1-11-2002	8.00
3.	ದಕ್ಷಿಣ ಕನ್ನಡ		9.75
4.	ಮಂಡ್ಯ		7.70
5.	ರಾಯಚೂರು ಬಳ್ಳಾರಿ	ಹಸುವಿನ ಹಾಲಿಗೆ	7.85
		ಎಮ್ಮೆಯ ಹಾಲಿಗೆ	9.15
6.	ಧಾರವಾಡ	ಹಸುವಿನ ಹಾಲಿಗೆ	
		ದಿನಾಂಕ 14-2-2002	7.00
		ದಿನಾಂಕ 15-4-2002	7.50
		ದಿನಾಂಕ 7-7-2002	7.85
		ದಿನಾಂಕ 15-10-2002	7.50
		ಎಮ್ಮೆಯ ಹಾಲಿಗೆ	
		ದಿನಾಂಕ 14-2-2002	10.00
		ದಿನಾಂಕ 15-4-2002	10.00
		ದಿನಾಂಕ 7-7-2002	9.90
		ದಿನಾಂಕ 15-10-2002	9.90
7.	ಗುಲ್ಬರ್ಗಾ	ಹಸುವಿನ ಹಾಲಿಗೆ	7.90
		ಎಮ್ಮೆಯ ಹಾಲಿಗೆ	9.90
8.	ಹಾಸನ	ದಿನಾಂಕ 7-3-2002	8.40
		ದಿನಾಂಕ 27-6-2002	8.00

1	2	3	
9.	ಮೈಸೂರು	ದಿನಾಂಕ 23-11-2002	7.90
10.	ಬಿಜಾಪುರ		7.89
11.	ತುಮಕೂರು		7.10
12.	ಬೆಳಗಾಂ	ಹಸುವಿನ ಹಾಲಿಗೆ	
		ದಿನಾಂಕ 1-2-2002	7.40
		ಎಮ್ಮೆಯ ಹಾಲಿಗೆ	
		ದಿನಾಂಕ 1-2-2002	10.00
13.	ಶಿವಮೊಗ್ಗ	ದಿನಾಂಕ 1-4-2002	8.80

ಧಾರವಾಡದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಸತಿನಿಲಯಗಳು

1589 (1395) ಶ್ರೀ ಹೊನ್ನಳ್ಳಿ ಜಬ್ಬರ್ ಖಾನ್ ಹೈಯರ್ ಖಾನ್ (ಹುಬ್ಬಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಧಾರವಾಡ, ಹಾವೇರಿ, ಗದಗ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುವ ವಸತಿ ನಿಲಯಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)?

2) ಪ್ರಸಕ್ತ ಸಾಲಿನಿಂದ ಹೊಸದಾಗಿ ವಸತಿನಿಲಯಗಳು ಪ್ರಾರಂಭಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

3) ಇಲ್ಲವಾದಲ್ಲಿ, ಕಾರಣಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

1) ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ:

		ಪ.ಜಾತಿ	ಪ.ಪಂಗಡ	ಹಿಂದುಳಿದ ವರ್ಗ
1.	ಧಾರವಾಡ	25	-	27
2.	ಹಾವೇರಿ	59	4	45
3.	ಗದಗ	49	1	33
	ಒಟ್ಟು	133	5	105

(ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ತೋರಿಸಲಾಗಿದೆ)

2) ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಸತಿ ನಿಲಯಗಳನ್ನು ಪ್ರಾರಂಭಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

3) ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳ ವಸತಿ ನಿಲಯಗಳು ಸಾಕಷ್ಟು ಇರುವುದರಿಂದ ಹಾಲಿ ವರ್ಷದಲ್ಲಿ ಹೊಸ ವಸತಿ ನಿಲಯಗಳ ಮಂಜೂರಾತಿ ನೀಡುವ ತುರ್ತು ಅವಶ್ಯಕತೆ ಇರುವುದಿಲ್ಲ.